ಸೃಜನಿ

I S S N: 2583-3510

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 105-107
Bi-Monthly, Peer-Reviewed, Open Access, Indexed Journal

SIRDF JOURNALS
editor@srujani.in
www.srujani.in

# ಚಿತ್ರದುರ್ಗ ಸುತ್ತಿನ ಜನಪದ ಕಾವ್ಯದಲ್ಲಿ ಸುಭದ್ರೆ ಪಾತ್ರ ಚಿತ್ರಣ

**ಮಂಜು ಜೆ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***

*ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು ಡಾ.ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿರುವ ಕೃತಿಯಾಗಿದ್ದು ಅದರಲ್ಲಿ ಎಂಟು ಮಹಾಭಾರತದ ಕಥಾವಸ್ತುವನ್ನೊಳಗೊಂಡ ಕಾವ್ಯಗಳಿವೆ. ಈ ಕಾವ್ಯಗಳಲ್ಲಿ ಹಾಡುವ ಧಾಟಿ ವಿಧಾನ ಮತ್ತು ಭಾಷೆಗಳಲ್ಲಿ ಪ್ರತ್ಯೇಕತೆಯನ್ನು ಕಾಣಬಹುದಾಗಿದೆ. ಈ ಕಾವ್ಯಗಳು ಜನಪದ ಸಾಹಿತ್ಯದಲ್ಲಿ ಈಗಾಗಲೇ ಸುಪ್ರಸಿದ್ಧವೂ ಸುಪರಿಚಿತವು ಆಗಿರುವಂತಹವು ಇವು ಕಾಲದ ದೃಷ್ಟಿಯಿಂದಲೂ ಕೂಡ ಗಮನಾರ್ಹ ಎಂದೆನಿಸುತ್ತವೆ.*

***Keywords:*** *ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಮೌಖಿಕ ಪರಂಪರೆ ಡಾ.ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು*

**ಪೀಠಿಕೆ**

ದ್ರೌಪದಿ ಕಾವ್ಯದಷ್ಟೆ ಸುದೀರ್ಘ ಕಥೆಯನ್ನು ಒಳಗೊಂಡಿದ್ದು ಸುಭದ್ರೆ. ಅಭಿಮನ್ಯು ಪ್ರಧಾನವಾಗಿ ಕಂಡುಬರುತ್ತಾರೆ. ಪೋಷಕ ಪಾತ್ರಗಳಾಗಿ ಬಲರಾಮ ಮತ್ತು ಆತನ ಹೆಂಡತಿ ಸುಪ್ಪಕ್ಕ, ಕುಂತಿದೇವಿ, ಪಂಚಪಾಂಡವರು ಬರುತ್ತಾರೆ. ಗರ್ಭಿಣಿಯಾದ ಸುಭದ್ರೆಯನ್ನು ಅಣ್ಣ ಬಲರಾಮ ತವರಿಗೆ ಕರೆದೊಯ್ಯುವುದು, ಸುಭದ್ರೆ ಅಭಿಮನ್ಯುವಿಗೆ ತಾಯಿಯಾಗುವುದು ಇಲ್ಲಿನ ಮುಖ್ಯವಸ್ತು. ಈ ಎರಡು ಘಟನೆಗಳ ಮಧ್ಯೆ ಕಥೆಯನ್ನು ದೀರ್ಘವಾಗಿ ಸ್ವಾರಸ್ಯಕರವಾಗಿ ಎಲ್ಲಿಯು ಕಥೆಗೆ ಚ್ಯುತಿ ಬರದಂತೆ ಜನಪದರ ಬದುಕಿನ ವಾಸ್ತವಿಕ ಹಿನ್ನೆಲೆಯಲ್ಲಿಯೇ ಚಿತ್ರಿಸಿರುವುದು ಒಂದು ವಿಶೇಷ. ಕಥೆಯ ಸ್ವಾರಸ್ಯಕರವಾದ ಕೆಲವು ಭಾಗಗಳನ್ನು ಹೀಗೆ ವಿಶ್ಲೇಷಿಸಿಲಾಗಿದೆ. ಸೂತಕವಾದ ಸುಭದ್ರೆ, ಸುಪ್ಪಕ್ಕ ಸೂತಕ ಕಳೆಯಲು ಕೂಡ ಹೊತ್ತು ಹರಿವ ನದಿಗೆ ಬರುತ್ತಾರೆ. ಗಂಗೆಗೆ ಸೂರ್ಯಂಗೆ ಪ್ರಾರ್ಥನೆ ಸಲ್ಲಿಸಿ, ಹುಟ್ಟುವ ಮಕ್ಕಳು ನಿಮ್ಮಂತೆ ಇರಬೇಕು ಎಂದು ಬೇಡಿಕೊಂಡು ಅತ್ತಿಗೆ ನಾದಿನಿ ತಮ್ಮ ಮನಸ್ಸಿನಲ್ಲಿಯ ಬಯಕೆಗಳನ್ನು ಬಿಚ್ಚಿ ಹೇಳಿಕೊಳ್ಳುತ್ತಾರೆ. ಅವರಿಬ್ಬರಲ್ಲಿ ನಡೆಯುವ ಸಂಭಾಷಣೆಯನ್ನು ಚಿತ್ರಿಸಿರುವ ಜಾಣ್ಮೆಯನ್ನು ಈ ತ್ರಿಪದಿಯಲ್ಲಿ ಕಾಣಬಹುದು.

> ***"ನಾನು ಹೆಣ್ಣು ಹಡುದಾರೆ ನೀನು ಗಂಡು ಹಡುದಾರೆ***
> ***ಬಲರಾಮನ ಗದ್ದೆ ಬೆಳೆದರೆ! ಸುಭದ್ರೆ***
> ***ಮಾಡನು ಮಕ್ಕಳ ಮದುವೆಯ"***[1]

[1].ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಪು.265

***Please cite this article as:*** ಮಂಜು, ಜೆ. (2025). ಚಿತ್ರದುರ್ಗ ಸುತ್ತಿನ ಜನಪದ ಕಾವ್ಯದಲ್ಲಿ ಸುಭದ್ರೆ ಪಾತ್ರ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(5), 105–107

ಸುಭದ್ರೆಗೆ ಒಂಬತ್ತು ತಿಂಗಳು ತುಂಬಿ ಬಯಕೆಗಳು ಕಾಡುತ್ತವೆ. ಬಯಸಿದ್ದೆಲ್ಲವನ್ನು ಅರ್ಜುನರಾಯ ತರಿಸಿಕೊಡುತ್ತಾನೆ. ಆದರೆ ಏಳನೇ ತಿಂಗಳಲ್ಲಿ ಬಯಸುವ ಬಯಕೆ ವಿಶಿಷ್ಟವಾದುದ್ದು. ಅದು ಜನಪದರ ಆಶಯವು ಆಗಿದೆ. ಏಳನೇ ತಿಂಗಳಲ್ಲಿ ಬಯಸುವುದು ಇದು

***"ಏಳನೇ ತಿಂಗಳಿಗೆ ನಾರೇನು ಭ್ರಮಿಸ್ಯಾಳೆ***
***ಹೇಳಿ ಕಳುಹ್ಯಾಳೆ ತವರೀಗ್"***[2]

ತವರ ಬಗ್ಗೆ ಇರುವ ಅಭಿಮಾನ ಹಾಗೂ ಅದು ಎಷ್ಟರ ಮಟ್ಟಿಗೆ ಅನಿವಾರ್ಯ ಎಂಬುದನ್ನು ಈ ಕಾವ್ಯದಲ್ಲಿ ನಿರೂಪಿಸಿರುವುದು ಗಮನಾರ್ಹ ಅಂಶ. ತಂಗಿಯನ್ನು ಕರೆತರಲು ಬಲರಾಮ ಬರುತ್ತಾನೆ. ಆಗ ತಂಗಿಗೆ ಆದ ಸಂತೋಷ ಅಪಾರ. ಬಂದಂಥ ಅಣ್ಣನಿಗೆ ವಿವಿಧ ಭಕ್ಷ್ಯ ಭೋಜನಗಳನ್ನು ಸಿದ್ಧಪಡಿಸುತ್ತಾಳೆ. ಐವರು ಪಾಂಡವರೊಡನೆ ಬಲರಾಮನು ಊಟಕ್ಕೆ ಕುಳಿತು ಕೊಳ್ಳುತ್ತಾನೆ. ಇಲ್ಲಿ ಬಲರಾಮನು ಆಡುವ ಮಾತಿನಿಂದ ಪಾಂಡವರಿಗಾದ ಅವಮಾನ ನೋವು ಅದರಿಂದ ಮುಂದೆ ಅನುಭವಿಸುವ ಕಷ್ಟದ ದಿನಗಳು ಇತ್ಯಾದಿ ಘಟನೆಗಳು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿವೆ. ಐವರು ಪಾಂಡವರೊಡನೆ ಬಲರಾಮ ಊಟಕ್ಕೆ ಕುಳಿತಾಗ ಅವರನ್ನು ಹಂಗಿಸಿ, ವನವಾಸಕ್ಕೆ ಹೋಗಬೇಕೆಂದು ಸೂಚಿಸುತ್ತಾನೆ. ಪಾಂಡವರು ಬಲರಾಮನ ಮಾತಿನಿಂದ ಅವಮಾನಿತರಾಗಿ ಮೇಲಕ್ಕೆದ್ದು, ಸುಭದ್ರೆಯನ್ನು ತವರಿಗೆ ಕರೆದುಕೊಂಡು ಹೋಗಲು ಬಲರಾಮನಿಗೆ ಅನುಮತಿಕೊಟ್ಟು ವನವಾಸಕ್ಕೆ ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಾರೆ.

ಗರ್ಭಿಣಿ ಸುಭದ್ರೆ ಪಾಂಡವರನ್ನು ಬಿಟ್ಟಿರಲು ಕಳವಳ ವ್ಯಕ್ತಪಡಿಸುತ್ತಾಳೆ. ಕುಂತಿದೇವಿ ಸಮಾಧಾನಪಡಿಸುತ್ತಾಳೆ. ಪಾಂಡವರ ಅಭಿಮತದಂತೆ ಸುಭದ್ರೆ ಬಲರಾಮನೊಡನೆ ತವರಿಗೆ ಹೊರಡುತ್ತಾಳೆ. ಕಾಡಿನಲ್ಲಿ ಬರುವಾಗ ಬೇಸರವನ್ನು ಕಳೆಯಲು ಅಣ್ಣನಿಂದ ಕತೆಯನ್ನು ಬಯಸುತ್ತಾಳೆ. ಕತೆ ಹೇಳುತಿರಲು ಬಲರಾಮನ ಕಿವಿಗೆ ಹೊಸ ಧ್ವನಿಯೊಂದು ಕೇಳಿಸುತ್ತದೆ. ಬಲರಾಮನಿಗೆ ಆಶ್ಚರ್ಯ ಆತಂಕ ಉಂಟಾಗಿ ಸುಭದ್ರೆಯ ಹೊಟ್ಟೆಯಲ್ಲಿ ಹ್ಞೂ ಗುಟ್ಟುವ ಮಗುವನ್ನು ಕೊಲ್ಲಲು ಉಪಾಯವನ್ನು ಯೋಚಿಸುತ್ತಾನೆ. ಇಲ್ಲಿ ಬಲರಾಮನ ಆಲೋಚನೆಗೆ ಮತ್ತು ಹೊಸಧ್ವನಿ ಯಾರೆಂಬುದನ್ನೂ ಅರ್ಥವಂತಿಕೆಯಿಂದ ಚಿತ್ರಿಸಿರುವ ತ್ರಿಪದಿ ಹೀಗಿದೆ.

***"ಕಾಗಿಯ ಧ್ವನಿಯಲ್ಲ ಗೂಗಿಯ ಧ್ವನಿಯಲ್ಲ***
***ದೇವನೆ ಪಾಂಡುವರ ಹೊಸಧ್ವನಿ! ಆದಾರೆ***
***ಎಳಬೀಲಿ ಗೋಣ ಮುರಿಬೇಕು"***[3]

ಹುಟ್ಟುವ ಮಗುವಿನಿಂದ ಆಗಬಹುದಾದ ಅನಾಹುತವನ್ನು ಅರಿತು ಬಲರಾಮ ಮಲಗಿದ್ದ ತಂಗಿಯನ್ನು ಒಂಟಿಯಾಗಿ ಅಡವಿಯಲ್ಲಿ ಬಿಟ್ಟು ಪಟ್ಟಣವನ್ನು ಸೇರುತ್ತಾನೆ. ಆಗ ಸುಭದ್ರೆಗೆ ಕಾಡು ಪ್ರಾಣಿಗಳೆ ಸಹಕರಿಸುತ್ತವೆ. ನಿದ್ದೆಯಿಂದ ಎಚ್ಚೆತ್ತಾ ಸುಭದ್ರೆ ಬಲರಾಮ ಇಲ್ಲದ್ದನ್ನು ಕಂಡು ಗೋಳಾಡುತ್ತಾಳೆ. ಪ್ರಯಾಸಪಟ್ಟು ಕೊನೆಗೂ ಅಣ್ಣನ ಮನೆಗೆ ಬರುತ್ತಾಳೆ.

ಸುಭದ್ರೆಯನ್ನು ಅತ್ತಿಗೆ ಸುಪ್ಪಕ್ಕ ಉಪಚರಿಸುವ ರೀತಿ ಹೆರಿಗೆ ನೋವನ್ನು ಅನುಭವಿಸುವಾಗ, ಮಾತಾಡಿಕೊಳ್ಳುವ ಬಗೆ, ಸಂಗಮ್ಮನ ಕೈಯಿಂದ ಅಭಿಮನ್ಯುವನ್ನು ಕೊಲೆ ಮಾಡಲು ಹೂಡಿದ ಸಂಚು ಇತ್ಯಾದಿ ಘಟನೆಗಳು ಈ ಭಾಗದಲ್ಲಿ ಮನೋಹರವಾಗಿ ಬಂದಿರುವುದು ಒಂದು ವಿಶೇಷ. ಅಭಿಮನ್ಯುವಿನ ಕುತ್ತಿಗೆಯನ್ನು ಮುರಿಯಲು ಪ್ರಯತ್ನಿಸಿದ್ದು, ಸುಪ್ಪಕ್ಕ ವಿಷದ ಅಡುಗೆ ಮಾಡಿದ್ದು ಹಾಗೂ ಅಣ್ಣ ಒಂಟಿಯಾಗಿ ಅಡವಿಯಲ್ಲಿ ಬಿಟ್ಟು ಬಂದದ್ದು ಇತ್ಯಾದಿ ಘಟನೆಗಳಿಂದಾಗಿ ಸುಭದ್ರೆಯ ಮನಸ್ಸಿಗೆ ಬೇಸರವಾಗಿ ಅಣ್ಣನಲ್ಲಿದ್ದ ಅಭಿಮಾನ

[2]. ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಪು.266

[3]. ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಪು.276

ಕಿಂಚಿತ್ತು ಉಳಿಯುವುದಿಲ್ಲ. ಅಭಿಮನ್ಯು ತಾಯಿಯ ಹೊಟ್ಟೆಯಲ್ಲಿ ಇದ್ದಾಗಲೆ ಬಲರಾಮನ ಕುತಂತ್ರವನ್ನು ತಿಳಿದಿದ್ದ. ತನ್ನನ್ನು ಕೊಲ್ಲಲು ಯತ್ನಿಸಿದ ಬಲರಾಮನ ಮನೆಯಲ್ಲಿ ಇರಲು ಅಭಿಮನ್ಯು ಇಷ್ಟಪಡುವುದಿಲ್ಲ. ತಾಯಿಯೊಡನೆ ತಂದೆಯ ಊರು ಸೇರುತ್ತಾನೆ. ಕುಂತಿದೇವಿ ಹಚ್ಚಿದ್ದ ದೀಪಗಳು ಪ್ರಕಾಶಮಾನವಾಗಿ ಉರಿಯುತ್ತಿರುತ್ತವೆ. ಪಾಂಡವರ ಬಗ್ಗೆ ಅಭಿಮನ್ಯು ತಾಯಿಯನ್ನು ವಿಚಾರಿಸಲಾಗಿ, ಪಾಂಡವರ ಸ್ಥೂಲ ವಿವರಗಳನ್ನು ಮಗನಿಗೆ ತಿಳಿಸುತ್ತಾಳೆ. ತಂದೆ ಅಜ್ಜಿ ಹಾಗೂ ಉಳಿದ ಪಾಂಡವರನ್ನು ಕಾಣುವ ಭಾಗ್ಯ ತನಗೆ ಇಲ್ಲವೆಂದು ಅಳುತ್ತಾನೆ. ಜನಪದರ ಆಶಯಗಳ ಸರಮಾಲೆಯನ್ನೇ ಹೊತ್ತು ಬಂದಿರುವ ಈ ಕಾವ್ಯದಲ್ಲಿ ಶೃಂಗಾರ ಹಾಸ್ಯದ ಸಂದರ್ಭಗಳನ್ನು ಸಹ ವಿಶೇಷವಾಗಿ ಕಾಣಬಹುದು.

**ಉಪಸಂಹಾರ**

ರೇವಣ್ಣ ಅವರು ಸಂಗ್ರಹಿಸಿರುವ ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು ಕೃತಿಯಲ್ಲಿರುವ ಕಾವ್ಯಗಳೆಲ್ಲವೂ ಸ್ತ್ರೀಯರೇ ಹಾಡಿರುವಂತಹವು ಅದರಲ್ಲಿಯೂ ಮುಖ್ಯವಾಗಿ ಹರಿಜನರಲ್ಲಿ ಮಾದಿಗ ಜನಾಂಗದವರು ಹಾಡಿರುವುವು. ಸಾಮಾನ್ಯ ಗಾಯಕರಿಂದ ಸಂಗ್ರಹಿಸಿರುವ ಇಲ್ಲಿನ ಕಾವ್ಯಗಳು ಚಿತ್ರದುರ್ಗದ ಸುತ್ತಮುತ್ತ ಜನಪ್ರಿಯವಾಗಿರುವಂತಹವು. ಚಿತ್ರದುರ್ಗದ ಸುತ್ತಮುತ್ತ ಹೆಚ್ಚಾಗಿ ಮಹಾಸತಿಯರ ಐತಿಹಾಸಿಕ ವ್ಯಕ್ತಿಗಳ ಹಾಡುಗಳಲ್ಲದೇ ದ್ರೌಪದಿ, ಸುಭದ್ರೆ ಕುರಿತ ಈ ಕಾವ್ಯಗಳನ್ನು ಅಲ್ಲಿನ ಗಾಯಕಿಯರು ಅತ್ಯಂತ ಸೊಗಸಾಗಿ ಹಾಡಿದ್ದಾರೆ. ಅದರಲ್ಲಿ ಸುಭದ್ರೆ ಕುರಿತ ಈ ಕಾವ್ಯದಲ್ಲಿ ಅವಳ ನೋವು ಸಂಕಟಗಳನ್ನು ನಮ್ಮ ಜನಪದರು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

**ಆಕರ ಗ್ರಂಥ**


- ಮೈಲಹಳ್ಳಿ ರೇವಣ್ಣ. (1984). *ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.


**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (1990). *ಜಾನಪದ ಶೋಧ.* ಶೈಲ ಪ್ರಕಾಶನ.
- ಕಾಳೇಗೌಡ ನಾಗವಾರ. (1973). *ಬಯಲು ಸೀಮೆಯ ಲಾವಣಿಗಳು.* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಕ್ಯಾತನಹಳ್ಳಿ ರಾಮಣ್ಣ. (1970). *ಗುಣಸವ್ವನ ಕಥೆ, ಜನಪದ ಕಥನ ಗೀತೆಗಳು.* ಜಾನಪದ ಬಳಗ
- ತಿಪ್ಪೇರುದ್ರಸ್ವಾಮಿ ಎಚ್. (1992). ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ ಪ್ರಕಾಶನ